ಶ್ರೀ ಎಸ್. ಗೋಪಾಲ ಗೌಡ.—ನನಗೆ ಗೊತ್ತಿರುವ ಹಾಗೆ, "Charged amount" ಮೇಲೂ ಸಭೆ ಸಾಮಾನ್ಯ ಚರ್ಚೆ ಮಾಡಬಹುದು.

Mr. SPEAKER.—Privy purse is something given under a treaty and is different from allowance given to the Governor.

ಶ್ರೀ ಎಸ್. ಗೋಪಾಲ ಗೌಡ—ಈ ಸಂದರ್ಭದಲ್ಲಿ ರಾಜರು ಪ್ರಿವಿಪರ್ಸ್ ಬಿಟ್ಟು ಕೊಡಬೇಕೆಂದು ನಾನು ಹೇಳಿದರೆ ಅದು ತಪ್ಪಾಗಲಾರದೆಂದು ತಿಳಿದುಕೊಂಡಿದ್ದೇನೆ. ಈ ಸಭೆಯ ಮೂಲಕ ಮಾಡತಕ್ಕ ಪ್ರಾರ್ಥನೆ ಇದು.

ಇನ್ನು ಕೋರ್ಟುಗಳ ವಿಷಯದಲ್ಲಿ ನಾನು ಹೆಚ್ಚು ಪ್ರಸ್ತಾಪ ಮಾಡುವುದಿಲ್ಲ. ಇಲ್ಲಿಯೂ ಒಂದು ಸಂಪ್ರದಾಯವನ್ನು ನಮ್ಮ ಸರ್ಕಾರದವರು ಸ್ಥಾಪಿಸಿದ್ದಾರೆ. ನಮ್ಮ ರಾಜ್ಯಕ್ಕೆ ಹೊರಗಡೆಯಿಂದ ಶ್ರೀ ದಾಸಗುಪ್ತ ಅವರು ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾಗಿ ಬಂದರು. ನಾನು ಈ ವಿಷಯದಲ್ಲಿ ಒಂದು ಸಂತೋಷವನ್ನು ವ್ಯಕ್ತಪಡಿಸಬೇಕಾಗಿರುವುದೇಕೆಂದರೆ, ಅವರು ಬಂದಾಗಿನಿಂದ ನಮ್ಮ ರಾಜ್ಯದಲ್ಲಿ ನಾವು ಕೋರ್ಟುಗಳನ್ನು ಕಂಡೆವು . ...

Mr. SPEAKER.— Before the Hon'ble Member develops the point, I would like to remind him that the power of appointment of the Chief Justice or the Judges of the High Court is with the Centre and not with the State Government.

ಶ್ರೀ ಎಸ್. ಗೋಪಾಲ ಗೌಡ.—ಆದರೂ ಕೋರ್ಟುಗಳಿಗೆ ಸಂಬಂಧಪಟ್ಟ ಹಾಗೆ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಅವಕಾಶವಿದೆಯೆಂದು ನಾನು ತಿಳಿದುಕೊಂಡಿದ್ದೇನೆ.

Mr. SPEAKER.—Not with regard to the appointment of High Court Judges.

ಶ್ರೀ ಎಸ್. ಗೋಪಾಲ ಗೌಡ.—ಮೈಸೂರು ಸರ್ಕಾರವನ್ನು ಕೇಳದೆ ಹೈಕೋರ್ಟ್ ನ್ಯಾಯಾಧೀಶರ ನೇಮಕವಾಗುವುದಿಲ್ಲ. ಇವರ ಸಲಹೆಯನ್ನು ಕೇಳಬೇಕು, ಇವರು ಒಂದು ಪೇನಲ್ ಹೆಸರುಗಳನ್ನು ಕಳುಹಿಸಬೇಕು. ಆ ಮೇಲೆ ಅವರು ನೇಮಕ ಮಾಡುತ್ತಾರೆ. ನಮ್ಮ ಪ್ರತಿನಿಧಿ ಸಭೆಗೆ ಕೇಳತಕ್ಕ ಅಧಿಕಾರವಿಲ್ಲದಿರುವ ಸಂಸ್ಥೆಗಳು ನಮ್ಮ ದೇಶದಲ್ಲಿರುವುದಕ್ಕೆ ಸಾಧ್ಯವಿಲ್ಲ. ಇದನ್ನು ತಿಳಿದುಕೊಂಡು ವಾತನಾಡುತ್ತಿದ್ದೇನೆ. ಇದೂ ಕೂಡದೆಂದು ತಾವು 'ರೂಲಿಂಗ್' ಕೊಡುವುದಾದರೆ ಅದಕ್ಕೆ ನಾನು ತರೆ ಬಾಗುತ್ತೇನೆ.

ಶ್ರೀ ಬಿ. ಹುಚ್ಚೇ ಗೌಡ.— ಹಾಗಾದರೆ ಕೇಂದ್ರ ಸರ್ಕಾರಕ್ಕೆ ನಮ್ಮ ಅಭಿಪ್ರಾಯ ಹೇಳುವುದಕ್ಕೆ ನಮಗೆ ಅಧಿಕಾರವಿಲ್ಲವೆ ?

Mr. SPEAKER.—I said only with regard to appointment that the final authority rests with the Central Government and not with the State Government. I did not say that the Central Government would or would not, should or should not or cannot consult the State Government. Members can offer general remarks, but to single out certain names for appointment as High Court Judges or to refer to the appointment of an outsider or other person as Chief Justice which is a thing of the past, may not form the proper subject for discussion on "Vote on Account".

Now it is 3 o' clock. The House will now rise and will meet after half an hour.

The House adjourned for recess at Three of the Clock and re-assembled at Thirty Minutes past Three of the Clock.

[MR. SPEAKER in the Chair.]

Members' Representation

***Sri C. J. MUCKANNAPPA.**—Sir, before we proceed with the business, I wish to bring to your notice one thing. You said, Sir, that the interruptions and interjections were too many. The previous speaker said that interjections and interruptions were like 'jumping like a monkey' and after eight or ten days he gave a ruling, and said that he never meant that and let not the members feel wounded. I want a clear ruling from you in regard to interjections and interruptions. They are permitted under the Rules. So, I want to know whether it is the privilege of the members to interject and interrupt or to keep quiet till they get a chance. We feel it rather irksome and we feel just like students. I would like to know what exactly is working in the mind of the Hon'ble Speaker. Are we to proceed according to the Rules or are we just to keep quiet till we get a chance to speak on the Budget or whatever might be the subject matter that may be under discussion ? This matter has been agitating me for the past four days and it is pricking my conscience. For the past five years I never felt anything like that.

Mr. SPEAKER.—The Hon'ble Member was pleased to mention that interjections were permitted under the Rules and when I requested him to mention the rule under which these interjections were allowed, he referred to the convention because the perusal

of the Rules to the extent I have done does not make provision for interjections at any time at all; but in a debate, particularly when very interesting points are being dealt with, some little interjections are inevitable and allowed. But to say that interjections should, as a matter of right, be allowed, to be made by any member and that there is a rule to that effect, I have yet to see such a rule and its scope. When a Hon'ble member is speaking, too many interjections from several members may not be desirable because the Hon'ble Member who is addressing must have full freedom to express his thoughts and should not be disturbed. The limit to which there can be interjection—whether by one or two or five or ten—has also to be seen. I want everybody to be free, subject to certain limitations and decorum. Let him not have any pricking of his heart or an uneasy conscience which he has been suffering for the last four days.

Sri ANNA RAO GANAMUKHI (Afzalpur).—Sir, sometimes it so happens that interesting points are made and some interjections may be very interesting to the House itself. Therefore, at times such interjections are made. So, I think the Chair may kindly allow them at times but if they are made too often, of course, it may not be desirable.

Mr. SPEAKER.—That is exactly what I have said and the Hon'ble Member has put it so beautifully.

VOTING OF DEMANDS FOR GRANTS IN ADVANCE (VOTE ON ACCOUNT) FOR THE YEAR 1962-63.

(Debate continued.)

ಶ್ರೀ ಎಸ್. ಗೋಪಾಲಗೌಡ.—ನಾನು ನ್ಯಾಯಾಂಗಕ್ಕೆ ಸಂಬಂಧಪಟ್ಟ ಹಾಗೆ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದೆ. ಹೈಕೋರ್ಟಿನ ಮುಖ್ಯ ನ್ಯಾಯಾಧೀಶರನ್ನು ಸಾಧ್ಯವಾದ ಮಟ್ಟಿಗೆ ಬೇರೆ ರಾಜ್ಯದಿಂದ ತೆಗೆದುಕೊಳ್ಳಬೇಕು ಎನ್ನುವ ಹೊಸ ಸಂಪ್ರದಾಯದ ಪ್ರಕಾರ ಹೊರಗಡೆಯಿಂದ ನ್ಯಾಯಾಧೀಶರನ್ನು ನೇಮಕ ಮಾಡುವುದಕ್ಕೆ ನಾವು ಒಪ್ಪಿಕೊಂಡಿದ್ದೇವೆ. ನನಗಾದರೂ ಈಗ ನೇಮಕವಾಗಿರತಕ್ಕ ಮುಖ್ಯ ನ್ಯಾಯಾಧೀಶರ ಬಗ್ಗೆ ಅಪಾರ ಗೌರವವಿದೆ; ನಾನು ಅವರನ್ನು ವೈಯಕ್ತಿಕವಾಗಿ ಗೌರವಿಸುತ್ತೇನೆ. ಆದರೆ ಈ ಸಂಪ್ರದಾಯವನ್ನು ಮುರಿಯುತಕ್ಕದ್ದು ಅಪಾಯ ಎನ್ನುವುದನ್ನೂ ಉಚಿತವಲ್ಲ ಎನ್ನುವುದನ್ನೂ ನಾನು ನಮ್ರತೆಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಇದಕ್ಕೆ ಸಂಬಂಧಪಟ್ಟ ಸಂಸ್ಥೆಗಳಲ್ಲಿ ಅಥವಾ ಮಂಡಲಗಳಲ್ಲಿ ಈ ಬಗ್ಗೆ ಇನ್ನೂ ಆಖೈರು ತೀರ್ಮಾನವಾಗಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಬೇರೆ ರಾಜ್ಯಗಳಿಂದ ನಾವು ಮುಖ್ಯ ನ್ಯಾಯಾಧೀಶರನ್ನು ನೇಮಿಸಿಕೊಳ್ಳತಕ್ಕದ್ದು ಸರಿಯೇ ತಪ್ಪೇ, ಎನ್ನುವ ಬಗ್ಗೆ ಆಖೈರು ತೀರ್ಮಾನ ಮಾಡಿಲ್ಲ. ಯಾವ ಸಂಪ್ರದಾಯವನ್ನು ಪರಿಪಾಲನೆ ಮಾಡುವ ದೃಷ್ಟಿಯಿಂದ ಹೊರಗಡೆಯಿಂದ ನ್ಯಾಯಾಧೀಶರನ್ನು ನೇಮಕಮಾಡಿಕೊಳ್ಳುವುದನ್ನು ಒಪ್ಪಿಕೊಂಡಿದ್ದಾರೋ ಆ ಸಂಪ್ರದಾಯವನ್ನು ಈ ದೇಶದಲ್ಲಿ ಇನ್ನು ಕೆಲವು ವರ್ಷಗಳಾದರೂ ಅನುಸರಿಸತಕ್ಕದ್ದು ಒಳ್ಳೆಯದು. ಎಲ್ಲಾ ದೃಷ್ಟಿಯಿಂದಲೂ ಅದು ಹಿತಕರ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇಂದು ಈ ಪ್ರಜಾತಂತ್ರದಲ್ಲಿ ಯಾರು ಏನು ಬೇಕಾದರೂ ಆಗಬಹುದು. ಹಾಗೆ ಉದಾಹರಣೆಗೆ ಹೇಳುವುದಾದರೆ ಒಬ್ಬ ಪಬ್ಲಿಕ್ ಪ್ರಾಸಿಕೂಟರ್ ಡಿಫೆನ್ಸ್ ಕೌನ್ಸಿಲ್ ಆಗಿದ್ದವರು ಮುಂದೆ ಒಬ್ಬ ಗೃಹ ಮಂತ್ರಿಗಳಾಗಬಹುದು. ಆದರೆ ನ್ಯಾಯಾಂಗದಲ್ಲಿ ಸಾಧ್ಯವಾದ ಮಟ್ಟಿಗೂ ನಿಷ್ಪಕ್ಷಪಾತವಾದ ದೃಷ್ಟಿಯನ್ನು ಹೊಂದಿರತಕ್ಕವರಾಗಿರಬೇಕು. ಆ ರೀತಿ ನಿಷ್ಪಕ್ಷಪಾತ ದೃಷ್ಟಿಯನ್ನು ಹೊಂದಿರತಕ್ಕವರು ಬಹಳ ವಿರಳ. ಒಂದು ಪಕ್ಷ ಅಥವಾ ಪಂಗಡಗಳಿಗೆ ಸೇರಿಕೊಂಡು ಎಷ್ಟೋ ಲೋಪ ದೋಷಗಳು ಉಂಟಾಗುತ್ತವೆ. ದೇಶದಲ್ಲಿ ಶಾಂತಿ, ಕಾನೂನನ್ನು ಕಾಪಾಡುವುದು ಬಹಳ ದೊಡ್ಡ ಜವಾಬ್ದಾರಿ. ಅಂಥಾ ನೀತಿ ನಿಯಮಗಳ ಉಲ್ಲಂಘನೆಯಾಗಬಹುದೆಂಬ ಅನುಮಾನಗಳು ಬಂದರೆ ಅಂಥಾ ರಾಜ್ಯದಲ್ಲಿ ಸಾಮಾನ್ಯ ಪ್ರಜೆ ಬದಕುವುದಕ್ಕೇ ಭಯವಾಗುತ್ತದೆ. ಆಸ್ತಿ, ಪ್ರಾಣ, ಮಾನ, ಮಠ ಇವುಗಳೆಲ್ಲಕ್ಕೂ ಅಪಾಯ ಉಂಟಾಗುತ್ತದೆ. ಅಂಥಾ ಸಂದರ್ಭದಲ್ಲಿ ನಾವು ಸಾಧ್ಯವಾದ ಮಟ್ಟಿಗೆ ನ್ಯಾಯಾಂಗವನ್ನೂ ಮತ್ತು ಪೋಲೀಸು ಇಲಾಖೆಯನ್ನು ಸರಿಯಾದ ರೀತಿಯಲ್ಲಿ ನಡೆಸಿಕೊಂಡು ಹೋಗತಕ್ಕಂಥಾದ್ದು ಸೂಕ್ತ. ನಾನು ಏನಾಗಿದ್ದೇನೆ, ಯಾರ ಸಂಬಂಧಿ, ಯಾವ ಪಕ್ಷಕ್ಕೆ ಸೇರಿದ್ದೇನೆ ಎನ್ನುವುದನ್ನು ಮರೆತು ಸಂಪೂರ್ಣವಾಗಿ ನ್ಯಾಯಾಂಗದಲ್ಲಿ ಒಂದೇ ದೃಷ್ಟಿಯಿಂದ ಹೋಗತಕ್ಕವರು ನಮಗೆ ಬೇಕು. ಆ ದೃಷ್ಟಿಯಿಂದ ನಾನು ಇವೊತ್ತು ನನಗೆ ಇರತಕ್ಕ ಅನುಮಾನ ಮತ್ತು ಭಯವನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತೇನೆ. ಆದ್ದರಿಂದ ಮುಂದೆ ಸರ್ಕಾರದವರು ಇಂಥಾ ಅಚಾತುರ್ಯ ಆಗದೆ ಇರುವ ಹಾಗೆ ನಡೆಸಿಕೊಂಡು ಹೋಗುತ್ತಾರೆಂದು ನಾನು ನಂಬಿದ್ದೇನೆ. ಈ ಬಗ್ಗೆ ನಾನು ಇನ್ನು ಹೆಚ್ಚು ಹೇಳಬೇಕಾಗಿದ್ದಿಲ್ಲವೆಂದು ಅಂದುಕೊಂಡಿದ್ದೇನೆ. ನಾನು ಮೊದಲೇ ಹೇಳಿದ ಹಾಗೆ ಹೊರಗಡೆಯಿಂದ ಯಾರೋ ಒಬ್ಬರು ನ್ಯಾಯಾಧೀಶರು ನಮ್ಮ ದೇಶಕ್ಕೆ ಬಂದರು. ಅವರು ಬಂದ ಮೇರೆ ಕೋರ್ಟುಗಳಲ್ಲಿ ಜಡ್ಜಿಗಳಿಗೆ ಕೆಲಸ ಇರಲಿ ಇಲ್ಲದೆ ಇರಲಿ ೧೧ ಗಂಟೆಯಿಂದ ೫ ಗಂಟೆಯ ವರೆಗೆ ಕುಳಿತುಕೊಳ್ಳಬೇಕು ಎನ್ನುವ ಆದೇಶ ಬಂತು. ಅವರು ಬಂದ ಮೇರೆ ನಾನಾ ಕಟ್ಟು ಕಟ್ಟಳೆಗಳನ್ನು ಜಾರಿಗೆ ತಂದರು, ಕೋರ್ಟು